## ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

ಸಂ:ಕಂ.ವಿವಾದ: 102/2014-15 ದಿ: 22 -04-2016

ಉಪಸ್ಥಿತರು: ಜೆ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1. ಶ್ರೀ ಡಿ. ಚಾಮರಾಜ ತಂದೆ: ಡಿ.ವೀರಭದ್ರಯ್ಯ
   ದರೂರು ಗ್ರಾಮ ತಾ: ಸಿರುಗುಪ್ಪ
2. ಶ್ರೀ ಡಿ. ಮಂಜುನಾಥ ತಂದೆ: ಡಿ. ವೀರಭದ್ರಯ್ಯ
   ದರೂರು ಗ್ರಾಮ ತಾ: ಸಿರುಗುಪ್ಪ

**ಪ್ರತಿವಾದಿಗಳು**

ಪಾರ್ವತೇಶ ತಂದೆ: ವೀರಭದ್ರಯ್ಯ
ದರೂರು ಗ್ರಾಮ ತಾ: ಸಿರುಗುಪ್ಪ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಟು ಸಂಖ್ಯೆ |
|---|---|---|---|---|
| ಹಾಗಲೂರು | 161 c/1a | 3-94 | 128/2009-10 | 132/09-10 |

ಪೀಠಿಕೆ:-

ಸಿರುಗುಪ್ಪ ತಾಲೂಕಿನ **ಹಾಗಲೂರು** ಗ್ರಾಮದ ಸ.ನಂ.**161c/1a** ವಿಸ್ತೀರ್ಣ 3-94 ಎಕರೆ ಜಮೀನಿಗೆ ಸಂಭಂದಿಸಿದಂತೆ ಪಾಲು ವಿಭಾಗ ಪತ್ರ ಪ್ರಕಾರ ಡಿ.ಚಾಮರಾಜ ತಂದೆ: ಡಿ.ವೀರಭದ್ರಯ್ಯ ಮತ್ತು **ಡಿ. ಮಂಜುನಾಥ ತಂದೆ:** ಡಿ.ವೀರಭದ್ರಯ್ಯ ಇವರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಲು ನಮೂನೆ - 21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ **ಪಾರ್ವತೇಶ ತಂದೆ:** ವೀರಭದ್ರಯ್ಯ, ದರೂರು ಇವರು ದಿ: **29-3-2010** ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು **ದಿ:14-8-2016, 22-01-2016 29-02-2016, 18-3-2016, 02-4-2016, ಮತ್ತು 15-4-2016** ರಂದು ಪ್ರಕರಣಕ್ಕೆ ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳು

ವಾದಿಗಳಾದ 1) ಡಿ. ಚಾಮರಾಜ 2) ಡಿ. ಮಂಜುನಾಥ ತಂದೆ: ವೀರಭದ್ರಯ್ಯ ದರೂರು ಗ್ರಾಮ ಇವರು ಹಾಗಲೂರು ಗ್ರಾಮದ ಸ.ನಂ.161c/1a ವಿಸ್ತೀರ್ಣ 3-94 ಎಕರೆ ಜಮೀನು ಪಾಲು ವಿಭಾಗ ಪತ್ರ ಪ್ರಕಾರ ತಲಾ 1-97 ಸೆಂಟ್ಸ್ ಜಮೀನು ಪಟ್ಟ ವರ್ಗಾವಣೆಗಾಗಿ ಅರ್ಜಿಸಲ್ಲಿಸಲಾಗಿ, ನಮ್ಮ ಅಣ್ಣನಾದ ಡಿ. ಪಾರ್ವತೇಶ ತಂದೆ: ವೀರಭದ್ರಯ್ಯ ದರೂರು ಇವರು ತಕರಾರು ಅರ್ಜಿ ಸಲ್ಲಿಸಿದ್ದು ಈಗ ಸದ್ರಿ ಜಮೀನಿನಲ್ಲಿ ತಲಾ 0-22 ಸೆಂಟ್ಸ್ ಜಮೀನು ಪ್ರಕಾರ ಒಟ್ಟು 0-44 ಸೆಂಟ್ಸ್ ಜಮೀನು ನಮ್ಮ ಅಣ್ಣನಾದ ಪಾರ್ವತೇಶ ಇವರಿಗೆ ಬಿಟ್ಟುಕೊಡುವುದಾಗಿ ಒಪ್ಪಿಗೆ ಸೂಚಿಸಿರುವುದರಿಂದ ತಕರಾರು ಅರ್ಜಿಯನ್ನು ವಾಪಾಸು ಪಡೆದಿರುತ್ತಾರೆಂದು ಪಾಲು ವಿಭಾಗ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು

ತಕರಾರು ಅರ್ಜಿದಾರರಾದ ಶ್ರೀ ಪಾರ್ವತೇಶ ತಂದೆ:ವೀರಭದ್ರಯ್ಯ ದರೂರು ಗ್ರಾಮ ಇವರು ಹಾಗಲೂರು ಗ್ರಾಮದ ಸ.ನಂ.161c/1a ವಿಸ್ತೀರ್ಣ 3-94 ಎಕರೆ ಜಮೀನು ಪಾಲು ವಿಭಾಗ ಪ್ರಕಾರ ತಲಾ 1-97 ಸೆಂಟ್ಸ್ ಜಮೀನು ಪಟ್ಟ ವರ್ಗಾವಣೆಗಾಗಿ ಅರ್ಜಿಸಲ್ಲಿಸಲಾಗಿ, ನಾನು ದಿ:29-3-2010 ರಂದು ತಕರಾರು ಅರ್ಜಿ ಸಲ್ಲಿಸಿದ್ದು ಸದ್ರಿ ಜಮೀನಿನಲ್ಲಿ ತಲಾ 0-22 ಸೆಂಟ್ಸ್ ಒಟ್ಟು 0-44 ಸೆಂಟ್ಸ್ ಜಮೀನು ನನಗೆ ಬಿಟ್ಟುಕೊಡಲು ಪರಸ್ಪರರು ಒಪ್ಪಿಗೆನೀಡಿರುವುದರಿಂದ ಸದರಿ ತಕರಾರು ಅರ್ಜಿಯನ್ನು ವಾಪಾಸು ಪಡೆದಿರುತ್ತೇನೆಂದು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ಪಾಲು ವಿಭಾಗ ಪತ್ರ ಪ್ರಕಾರ ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಹಾಗಲೂರು ಗ್ರಾಮದ ಸ.ನಂ. ಸ.ನಂ.161c/1a ವಿಸ್ತೀರ್ಣ 3-94 ಎಕರೆ ಜಮೀನು ಪಾಲುವಿಭಾಗಪತ್ರ ಪ್ರಕಾರ ಡಿ.ಚಾಮರಾಜ ತಂದೆ: ವೀರಭದ್ರಯ್ಯ, ಡಿ.ಮಂಜುನಾಥ ತಂದೆ: ಡಿ.ವೀರಭದ್ರಯ್ಯ ದರೂರು ಇವರ ಹೆಸರಿಗೆ ಹಕ್ಕುಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 22-04-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು,
ಉಪ ತಹಶೀಲ್ದಾರರು
ನಾಡ ಕಾರ್ಯಾಲಯ, ...
ಸಿರುಗುಪ್ಪ ತಾಲ್ಲೂಕು

ಇದರ ಪ್ರತಿಯನ್ನು:

1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ
3. ಕಛೇರಿ ಕಡತಕ್ಕೆ.

ಡಿ. ಪಾರ್ವತೇಶ